ಅಧ್ಯಕ್ಷರು.— ಉತ್ತರ ಇನ್ನೂ ದೊರಕದಿರುವ ಕಾರಣ ನಾಳೆ ಕೊಡುವುದಾಗಿ ಹೇಳಿ ಪತ್ರ ಬರೆದಿದ್ದಾರೆ. ದಯವಾಡಿ ಕುಳಿತುಕೊಳ್ಳಿ. ನಾಳೆ ಉತ್ತರ ಕೊಡಿಸುತ್ತೇನೆ. ಇದರ ಪ್ರಾಮುಖ್ಯತೆಯನ್ನು ನಾನು ಬಲ್ಲೆ.

ಎಂ.ಎಲ್.ಎ. ಶ್ರೀಮತಿ ಮುಕ್ತರುನ್ನಿಸಾ ಅವರನ್ನು ಮೈಸೂರಿನಲ್ಲಿ ಬಂಧಿಸಿದ ಬಗ್ಗೆ ಪ್ರಸ್ತಾಪ

ಶ್ರೀ ಎಂ. ವೀರಪ ಮೊಯಿಲಿ.— ಮಾನ್ಯ ಸದಸ್ಯಣಿಯವರಾದ ಮುಕ್ತಾರುನ್ನಿಸಾಬೇಗಂ ಕಾರ್ಪೊರೇಟರುಗಳು, ಮೈಸೂರು ಕಾರ್ಪೊರೇಷನ್ ಅಪೊಷಿಷನ್ ಲೀಡರ್ ಅವರನ್ನೆಲ್ಲಾ ಅನ್ಯಾಯವಾಗಿ ಅರೆಸ್ಟ್ ಮಾಡಿ, ಮೈಸೂರಿನಲ್ಲಿ ಪೋಲೀಸ್ ರಾಜ್ಯವನ್ನು ನಿರ್ಮಾಣ ಮಾಡಿದ್ದಾರೆ. ಇದಕ್ಕೆ ಉತ್ತರ ಕೊಡಲು ಏಕೆ ಮಂತ್ರಿಗಳು ತಪ್ಪಿಸಿಕೊಳ್ಳಬೇಕು ? ಅವರಿಗೆ ಏನು ಕಷ್ಟ ಇದೆ ? ಶ್ರೀ ವೈ. ಕೆ. ರಾಮಯ್ಯನವರು ಮಂತ್ರಿ ಶ್ರೀ ಚಂದ್ರಶೇಖರ್‌ರವರು ಈ ಇಬ್ಬರು ಮಂತ್ರಿಗಳು ಇರುವಾಗ ಘಟನೆ ನಡೆದಿದೆ. ವರದಿ ಏನು ಎಂದು ತರಿಸಬೇಕು ? ಮಾನ್ಯ ಮಂತ್ರಿಗಳ ಸಮಕ್ಷಮದಲ್ಲಿ ಅವರ ಹೇಳಿಕೆ ಮೇಲೆ ಇವರ ಅರೆಸ್ಟ್ ಆಗಿದೆ.

ಅಧ್ಯಕ್ಷರು.— ಇವತ್ತು ಸಿ ಗಮನ ಸೆಳೆಯುವ ಸೂಚನೆಗಳಿವೆ. ಅದರಲ್ಲಿ ಇದೂ ಕೂಡ ಮಹತ್ವವಾದುದು, ಗಂಭೀರವಾದುದೆಂದು ಇವತ್ತಿನ ದಿವಸ ಇಟ್ಟಿದ್ದೇವೆ ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ನಾಳೆ ಕೊಡಿಸುತ್ತೇನೆ. ನಾಳೆ ಇಡಿ ಎಂದು ಮಂತ್ರಿಗಳು ಪತ್ರ ಬರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಂತ್ರಿಮಂಡಲ ಕುಸಿದಿದೆ, ಅದು ಕೆಲಸ ಮಾಡುತ್ತಿಲ್ಲ. ಚಟುವಟಿಕೆ ಇಲ್ಲ. ನಾವೇನು ೭-೮ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಂದು ಆಘಾತನೆ ಮಾಡಿದ್ದೇವೆ. ಅದು ಸಾಬೀತಾಗುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಸುಮ್ಮನೇ ಬರೀ ಮಾತಿನಿಂದ ಏನೂ ಆಗುವುದಿಲ್ಲ.

(ಗೊಂದಲ)

೪-೦೦ ಪಿ. ಎಂ.

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ ಟೈಂ ವೇಸ್ಟ್ ಮಾಡುವುದು ಬೇಡ. ನಾಳೆ ತಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ನಾವು ಮೊದಲು ಸಂಶಯ ವ್ಯಕ್ತಪಡಿಸಿದ್ದೇವೆ. ಅದರಂತೆ ಸಭೆಯಲ್ಲಿ ವೈ ಕೆ. ರಾಮಯ್ಯನವರು ಇಲ್ಲ, ದೇವೇಗೌಡರು ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಂ ಹೇಳಿದ ಹಾಗೆ ಕೊಲ್ಯಾಪ್ಸ್ ಆಗಿದೆ ಎನ್ನುವ ಮಾತು ಸರಿ, ಅವರ ಕನಸು ಏನಿತ್ತು ಅದು ಕೊಲ್ಯಾಪ್ಸ್ ಆಗಿದೆ. ಅವರು ಏನೋ ಕನಸು ಕಾಣುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿಡಿಲು ಬಡಿದು ಅದರಿಂದ ಚೇತರಿಸಿಕೊಳ್ಳದೆ ತತ್ತರಿಸಿ ಹೋಗಿದ್ದಾರೆ, ಅವರಂ ಇಲ್ಲಿಗೆ ಬರುವುದಕ್ಕೆ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಪ್ರಹಾರ ಬಹಳ ದೊಡ್ಡದು. ತತ್ತರಿಸಿದಡಕ್ಕಂತ ಬೀಳುವ ಬದಲು ತೂರಾಡುತ್ತಿದೆ ಈ ಮಂತ್ರಿ ಮಂಡಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಲ್ಲಿ ಕೂಡ ಅಲುಗಾಡುತ್ತಾ ಇದೆ, ಅದೂ ಸ್ವಲ್ಪ ದಿವಸದಲ್ಲೇ ಹೋಗುತ್ತದೆ.

ಅಧ್ಯಕ್ಷರು.—ಎರಡೂ ಕಡೆ ಜೋಕ್ಸ್ ಸಾಕು.

ಶ್ರೀ ಎಸ್. ಆರ್. ಬೊಮ್ಮಾಯಿ.—೨೪ ಗಂಟೆಗಳಲ್ಲಿ ಒಬ್ಬ ಮಂತ್ರಿಯನ್ನು ತೆಗೆದು ಮತ್ತೊಬ್ಬ ಮಂತ್ರಿಯನ್ನು ಮಾಡುತ್ತಾರೆ. ಮಧ್ಯ ರಾತ್ರಿಯಲ್ಲಿ ಸಭೆ ಕರೆಯುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಶಕ್ತಿ ಇದ್ದರೆ ನೀವೂ ಆ ರೀತಿ ಮಾಡಿ ತೋರಿಸಿ. ಇರಿಗೇಷನ್ ಮಂತ್ರಿಗಳು ಹೆದರಿಸಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಧ್ಯ ರಾತ್ರಿ ಶಾಸಕರ ಸಭೆ ಕರೆಯುತ್ತಾರೆ. ೨೫ ಜನ ಬರುತ್ತಾರೆ. ಬೆಳಿಗ್ಗೆ ಪ್ರತಿಜ್ಞಾವಿಧಿ ನಡೆಯುತ್ತದೆ. ೨ ಗಂಟೆ ತಡವಾಗಿದ್ದರೆ ರಾಜೀವಗಾಂಧಿ ಮನೆಗೆ ಹೋಗುತ್ತಾ ಇದ್ದರು.

ಶ್ರೀ ಎಸ್. ಬಂಗಾರಪ್ಪ.—ಇದು ಇವರು ಹುಟ್ಟಿಸಿರತಕ್ಕಂಥ ಕವಿತೆಗಳು ಆಶುಭಾಷಣ. ಕವನ ಕತೆ ಚೆನ್ನಾಗಿ ಮಾಡುತ್ತಿದ್ದೀರಿ, ಇದೆಲ್ಲಾ ಪರ್ವಾಗಿಲ್ಲ ಈಗ ಮಂತ್ರಿಗಳಾದ ಚಂದ್ರಶೇಖರ್‌ರವರು ಎಲ್ಲಿದ್ದಾರೆ ಎನ್ನುವುದು ಬೇಕು. ಅವರು ಪತ್ರ ಬರೆದು ಕಳುಹಿಸುವುದು ಅಲ್ಲ. ಅವರು ಮೇಲ್ಮನೆಯಲ್ಲಿದ್ದಾರೋ ಅಥವಾ ಮನೆಯಲ್ಲಿದ್ದಾರೋ. ಪತ್ರ ಬರೆದು ಕಳುಹಿಸಿ ಮಂತ್ರಿ ಕೆಲಸ ಮಾಡುವ ಹಾಗಿದ್ದರೆ ಈ ದೇಶದಲ್ಲಿ ಮಂತ್ರಿಗಳು ಇಲ್ಲಿ ಬಂದು ಕುಳಿತಿರಬೇಕು ಎಂದು ನಿಯಮ ಇರುವುದಕ್ಕೆ ಸಾಧ್ಯವಿರುತ್ತಾ ಇರಲಿಲ್ಲ. ಮಾನ್ಯ ಸದಸ್ಯರು ಇಲ್ಲಿ ವಿಷಯವನ್ನು ಎತ್ತಿದಾಗ ಮೊದಲು ಮಂತ್ರಿಗಳು ಬಂದು ಎಕ್ಸ್‌ಪ್ಲೇನ್ ಮಾಡಿ ತಪ್ಪು ಅಪ್ಪಣೆ ಪಡೆದು ಈ ಕಾರಣದಿಂದ ಉತ್ತರ ಬಂದಿಲ್ಲ ಎಂದು ಹೇಳುವ ಬದಲು ಪತ್ರ ಬರೆದು ಕಳುಹಿಸಿ ಪೋಸ್ಟ್ ಆಫೀಸ್ ತರಹ ಮಾಡುವ ಕೆಲಸಕ್ಕೆ ಮಂತ್ರಿಗಳೇ ಇರಬೇಕೇ. ಈ ಮಂತ್ರಿ ಮಂಡಲಕ್ಕೆ ತಾವು ಭೀಮಾರಿ ಹಾಕಬೇಕು. ಭೀಮಾರಿ ಹಾಕಿ ಎಂದು ಹೇಳಿದಾಗ ಆಗಲಿ ಎಂದು ಹೇಳುತ್ತೀರಿ. ಒಂದು ಸಾರಿ ಭೀಮಾರಿ ಹಾಕಿ.

ಅಧ್ಯಕ್ಷರು.—ನಾನು ಆಗಲೇ ಹೇಳಿದೆ. ನೂರಕ್ಕೆ ನೂರರಷ್ಟು ಮಂತ್ರಿಗಳು ಹಾಜರು ಇರಬೇಕು ಎಂದು ಇಲ್ಲ, ನೂರಕ್ಕೆ ನೂರರಷ್ಟು ಸದಸ್ಯರು ಹಾಜರು ಇರಬೇಕು ಎಂದು ಇಲ್ಲ ಅನಿವಾರ್ಯ ಕಾರಣಗಳಿಂದ ಸದಸ್ಯರು ಬರದೇ ಇರಬಹುದು.

ಶ್ರೀ ಆರ್. ಎನ್. ನಾಯಕ್.—ಈಗ ಭೀಮಾರಿ ಹಾಕಿ ಆಯಿತೇ ?

ಅಧ್ಯಕ್ಷರು.—ತಾವು ಕೂಡಿ ಹೇಳುತ್ತೇನೆ.

ಗಮನ ಸೆಳೆಯುವ ಸೂಚನೆ.

೧) ಮೈಸೂರು ಅರಮನೆಯಲ್ಲಿ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ವಸ್ತು ಪ್ರದರ್ಶನಾಲಯವನ್ನು ತೆರೆದು ಪ್ರವೇಶ ಶುಲ್ಕ ವಸೂಲು ಮಾಡುತ್ತಿರುವ ಬಗ್ಗೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ಮೈಸೂರು ಅರಮನೆಯಲ್ಲಿ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರು ವಸ್ತು ಪ್ರದರ್ಶನಾಲಯವನ್ನು ತೆರೆದು ಪ್ರವೇಶ ಶುಲ್ಕ ವಸೂಲು ಮಾಡುತ್ತಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ದಿನಾಂಕ ೨೧-೨-೧೯೮೮ ರಿಂದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಅರಮನೆಯಲ್ಲಿ ತಾವು ವಾಸಿಸುತ್ತಿರುವ ನಿವಾಸದ ಒಂದು ಭಾಗದಲ್ಲಿ ಖಾಸಗಿ ಸಂಗ್ರಹಾಲಯವನ್ನು ಪ್ರಾರಂಭಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರವೇಶ ಶುಲ್ಕವಾಗಿ ಪ್ರತಿಯೊಬ್ಬರಿಗೆ ರೂ. ೨-೦೦ನ್ನು ವಿಧಿಸಲಾಗುತ್ತಿದೆ. ಒಡೆಯರ್ ವಂಶದ ಹಲವಾರು ಖಾಸಗಿ ಪ್ರಾಚೀನ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಪ್ರವೇಶವು ಶ್ರೀ ಲಕ್ಷ್ಮೀರಮಣ ಸ್ವಾಮಿ ದೇವಸ್ಥಾನದ ಪಶ್ಚಿಮ ಭಾಗದಿಂದ ಇರುತ್ತದೆ. ಶ್ರೀ ಒಡೆಯರ್ ಅವರು ಮುದ್ರಿಸಿದ ಪ್ರವೇಶದ ಚೀಟಿಗಳಿಗೆ ಕ್ರಮ ಸಂಖ್ಯೆ ಇರುತ್ತದೆ. ಅಂದಾಜಿನ ಲೆಕ್ಕದ ಪ್ರಕಾರ ಪ್ರತಿದಿನ ಸಂಪಾದಾರು ೨,೦೦೦ ಜನರು ಸಂಗ್ರಹಾಲಯವನ್ನು ಸಂದರ್ಶಿಸುತ್ತಿದ್ದಾರೆ. ಪ್ರವೇಶ ಧರದ ಹೊರತಾಗಿ ಪಾದರಕ್ಷೆ ಮತ್ತು ಇತರೆ ವಸ್ತುಗಳನ್ನು ಇಡುವುದಕ್ಕಾಗಿ ೨೦ ಪೈಸೆಗಳನ್ನು ವಸೂಲು ಮಾಡಲಾಗುತ್ತಿದೆ.